ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಮಂಡಲ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ

ದಿನಾಂಕ : DATE : 05/03/2020

## ರಾಜ್ಯಸಭೆ ರೀತಿ ನೀತಿಸಂಹಿತೆ ರಾಜ್ಯಕ್ಕೂ ತನ್ನಿ: ದೇಶಪಾಂಡೆ

ವಿಧಾನಸಭೆ: ಸದನದಲ್ಲಿ ಶಿಸ್ತು ಕಾಪಾಡಿಕೊಳ್ಳುವ ಉದ್ದೇಶದಿಂದ ರಾಜ್ಯಸಭೆಯಲ್ಲಿ ಜನಪ್ರತಿನಿಧಿಗಳು ಹೇಗೆ ವರ್ತಿಸಬೇಕು ಎಂಬ ನೀತಿ ಸಂಹಿತೆಯನ್ನು ಅಳವಡಿಸಿಕೊಂಡಿರುವಂತೆ ರಾಜ್ಯದಲ್ಲೂ ತರುವ ಅಗತ್ಯ ಇದೆ ಎಂದು ಕಾಂಗೆಸ್‌ನ ಆರ್.ವಿ.ದೇಶಪಾಂಡೆ ಪ್ರತಿಪಾದಿಸಿದ್ದಾರೆ. ಬುಧವಾರ ಸಂವಿಧಾನ ಕುರಿತು ವಿಶೇಷ ಚರ್ಚೆಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಜನಪ್ರತಿನಿಧಿಗಳ ವರ್ತನೆ ಸದನದಲ್ಲಿ ಶೋಭೆ ತರದಂಥ ರೀತಿಯಲ್ಲಿರುತ್ತದೆ. ಜನತೆಗೆ ಮಾದರಿಯಾಗಬೇಕಾದ ಜನಪ್ರತಿನಿಧಿಗಳ ನಡೆಯಲ್ಲಿ ಬದಲಾಗಬೇಕಾಗಿದೆ. ರಾಜ್ಯಸಭೆಯಲ್ಲಿ ಜನಪ್ರತಿನಿಧಿಗಳ ವರ್ತನೆ ಬಗ್ಗೆ ನೀತಿಸಂಹಿತೆಯನ್ನು ಅಳವಡಿಸಿಕೊಳ್ಳಲಾಗಿದೆ. ಅದೇ ರೀತಿಯಲ್ಲಿ ರಾಜ್ಯದಲ್ಲಿಯೂ ನೀತಿಸಂಹಿತೆಯನ್ನು ತರಬೇಕಾದ ಅಗತ್ಯ ಇದೆ ಎಂದು ಅಭಿಪ್ರಾಯಪಟ್ಟರು.

## ವಿಧಾನ ಪರಿಷತ್ತಲ್ಲೂ ಸಂವಿಧಾನದ ಕುರಿತು ಚರ್ಚೆ

ವಿಧಾನ ಪರಿಷತ್: ಭಾರತ ದೇಶ ವಿಶ್ವದಲ್ಲಿಯೇ ಅತ್ಯಂತ ವೈವಿಧ್ಯಮಯ ರಾಷ್ಟ್ರವಾಗಿದೆ. 4,635 ಜನಾಂಗೀಯ ಪಂಗಡಗಳು, 325 ಭಾಷೆಗಳು ಹಾಗೂ 25 ಲಿಪಿಗಳಿದ್ದು ಪರಸ್ಪರ ಅವಲಂಬನೆ ಮತ್ತು ಸಾಮೂಹಿಕ ಹೋರಾಟಗಳು ನಮ್ಮ ವೈವಿಧ್ಯತೆ ಹಾಗೂ ಏಕತೆಯನ್ನು ಸುಭದ್ರಗೊಳಿಸಿವೆ ಎಂದು ಸಭಾಪತಿ ಕೆ.ಪ್ರತಾಪಚಂದ್ರ ಶೆಟ್ಟಿ ಪ್ರತಿಪಾದಿಸಿದರು.

ಪರಿಷತ್‌ನಲ್ಲಿ ಸಂವಿಧಾನ ಕುರಿತ ವಿಶೇಷ ಚರ್ಚೆಗೂ ಮುನ್ನ ತಮ್ಮ ಪೀಠದಿಂದ ಎದ್ದು ನಿಂತು ಪ್ರಾಸ್ತಾವಿಕ ಭಾಷಣ ಮಾಡಿದ ಅವರು, ಡಾ.ಬಿ.ಆರ್. ಅಂಬೇಡ್ಕರ್ ಅವರ ಕನಸಿನ ಭಾರತವನ್ನು ನನಸು ಮಾಡುವುದಕ್ಕಾಗಿ ಸಂವಿಧಾನದ ಆಶಯಗಳು ಸಶಕ್ತವಾಗಿದ್ದು, ಅವುಗಳನ್ನು ಜನಸಾಮಾನ್ಯರಿಗೂ ತಲುಪುವಂತೆ ಮಾಡುವ ಗುರುತರ ಜವಾಬ್ದಾರಿ ಜನ ಪ್ರತಿನಿಧಿಗಳಾದ ನಮ್ಮೆಲ್ಲರ ಮೇಲಿದೆ ಎಂದರು.